ಓಹ್! ಏಕೆ ಹಿಂದಿನ ಈ ಎಲ್ಲಾ ಘಟನೆಗಳು ಇಷ್ಟೆಲ್ಲಾ ವರ್ಷಗಳ ನಂತರ ಇಂದು ಮರುಕಳಿಸುತ್ತಿವೆ? ಅವರೆಲ್ಲ ಏಕೆ ನಾನು ಶ್ರೀಮಂತನಾದ ಮೇಲೆ ನನ್ನನ್ನು ಹುಡುಕಿಕೊಂಡು ಬರಲಿಲ್ಲ? ಅಥವಾ ತಾನು ಶ್ರೀಮಂತನಾದದ್ದೇ ಅವರಿಗೆ ತಿಳಿಯಲಿಲ್ಲವೊ? ಬೇಕಾಗಿಯೇ ಅದನ್ನೆಲ್ಲಾ ಮರೆತೆನೆ ತಾನು? ಇವೆಲ್ಲ ತನ್ನ ಸುಪ್ತಾವಸ್ಥೆಯಲ್ಲಿ ಬಿದ್ದಿರುವ ಮೆದುಳಿನ ಯಾವ ಮೂಲೆಯಲ್ಲಿ ಬಿದ್ದಿದ್ದವು. ಗುನ್ನಾಲಾಲ್ ಎದ್ದು ಒಂದು ಗ್ಲಾಸ್ ನೀರು ಕುಡಿದಿದ್ದ. ತನ್ನ ಬದುಕಿಗೆ ಬಹು ದೊಡ್ಡ ತಿರುವು ಕೊಟ್ಟ ಇನ್ನೊಂದು ಘಟನೆ ಪಕ್ಕನೆ ನೆನಪಾಗಿತ್ತು. ಮಫತ್ಲಾಲ್ ಮಿಲ್ಲಿನಲ್ಲಿ ಅಸಿಸ್ಟೆಂಟ್ ಮ್ಯಾನೇಜರ್ ಆಗಿ ಬಡ್ತಿ ಪಡೆದ ಬಳಿಕ ಧಾರಾವಿಯನ್ನು ತೊರೆದು ಮಾತುಂಗದ ಶಿವಾಜಿ ಪಾರ್ಕ್ ಬಳಿಯ ಹಳೆಯ ರೂಮೊಂದಕ್ಕೆ ಶಿಫ್ಟ್ ಆಗಿ ಐದು ತಿಂಗಳು ಕಳೆದಿತ್ತಷ್ಟೆ. ರೂಮಲ್ಲಿ ಒಬ್ಬನೇ ಇದ್ದು ಅಡುಗೆಯನ್ನೂ ಗುನ್ನಾಲಾಲನೆ ಮಾಡಿಕೊಳ್ಳುತ್ತಿದ್ದ. ಪರ್ಚೇಸ್ ಸೆಕ್ಷನ್ನಿನ ಮ್ಯಾನೇಜರನೊಂದಿಗೆ ಗುನ್ನಾಲಾಲ್ ಕೂಡ ರಜಾ ದಿನಗಳಲ್ಲೂ ಓವರ್ ಟೈಮ್ ಡ್ಯೂಟಿ ಮಾಡುತ್ತಿದ್ದ. ಅವನಿಗೆ ದುಡಿಮೆಯ ರುಚಿಯ ಜೊತೆಗೆ ದುಡ್ಡಿನ ರುಚಿಯೂ ಹತ್ತಿಬಿಟ್ಟಿತ್ತು. ಅಂದು ಗಣೇಶ ಚತುರ್ಥಿಯ ಹಿಂದಿನ ದಿನ. ಗೌರಿ ಭೂಮಿಗೆ ಆಗಮಿಸುವ ದಿನ. ಫ್ಯಾಕ್ಟರಿಗೆ ಮೂರು ದಿನಗಳ ರಜೆಯನ್ನು ಘೋಷಿಸಲಾಗಿತ್ತು. ಹಿಂದಿನ ದಿನವೇ ಮ್ಯಾನೇಜರ್ ಮುರಳೀಧರ ರಾಠೋಡ್ ನಾಳೆ ಸೂರತ್‌ನಿಂದ ಫ್ಯಾಬ್ರಿಕ್ ಲೋಡ್ ಬರುವುದರಿಂದ ಬೆಳಿಗ್ಗೆ ಹನ್ನೊಂದು ಗಂಟೆಗೆಲ್ಲ ಫ್ಯಾಕ್ಟರಿಗೆ ಬರಬೇಕೆಂದು ಗುನ್ನಾಲಾಲನಿಗೆ ಹೇಳಿದ್ದ. ಗುನ್ನಾಲಾಲ್ ಮಾರನೆಯ ದಿನ ಸರಿಯಾಗಿ ಹನ್ನೊಂದು ಗಂಟೆಗೆ ಫ್ಯಾಕ್ಟರಿಗೆ ಬಂದಿದ್ದ. ಲಾರಿಯವರು ಫ್ಯಾಬ್ರಿಕ್ ಬಂಡಲುಗಳನ್ನು ಗೋಡೌನ್ನಿನಲ್ಲಿ ಕಿತ್ತುಹಾಕಿ ಹೊರಟು ಹೋಗಿದ್ದರು. ಹಬ್ಬವಾದ್ದರಿಂದ ಹಗಲು ಶಿಫ್ಟಿನ ಸೆಕ್ಯುರಿಟಿ ಗಾರ್ಡುಗಳೂ ಬಂದಿರಲಿಲ್ಲ. ರಾಠೋಡ್ ಮತ್ತು ಗುನ್ನಾಲಾಲ್ ಇಬ್ಬರೇ ಫ್ಯಾಬ್ರಿಕ್ ಬಂಡಲುಗಳನ್ನು ಜೋಡಿಸುತ್ತಿದ್ದರು. ಒಂದು ಬಂಡಲಿನಲ್ಲಿ ಫ್ಯಾಬ್ರಿಕ್ ಇಲ್ಲದೆ ಕಾಗದದ ಕಂತೆಗಳಿರುವುದು ಗುನ್ನಾಲಾಲನಿಗೆ ಸ್ಪರ್ಶ ಮಾತ್ರದಿಂದಲೇ ತಿಳಿದುಹೋಗಿತ್ತು. ಬೆರಳಿನಿಂದ ತಿವಿದು ಸಂದು ಮಾಡಿ ನೋಡಿದ. ನೋಟಿನ ಕಂತೆಗಳು! ಖೋಟಾ ನೋಟುಗಳಿರಬಹುದೆ? ಕ್ಷಣ ಅನುಮಾನ ಬಂದಿತ್ತು. ಕಷ್ಟಪಟ್ಟು ಎರಡು ಬೆರಳುಗಳನ್ನು ತೂರಿಸಿ ಒಂದು ನೋಟನ್ನು ಎಳೆದುಕೊಂಡಿದ್ದ. ಸಾವಿರ ರೂಪಾಯಿಯ ನೋಟು. ಕೂಡಲೇ ಮುರಳೀಧರ ರಾಠೋಡನಿಗೆ ತೋರಿಸಿದ. ರಾಠೋಡ್ ನೋಟನ್ನು ಬೆರಳಿನಿಂದ ಮೂರ್ನಾಲ್ಕು ಬಾರಿ ಬಡಿದು, ಕಣ್ಣಿಗೆ ಹತ್ತಿರ ಇಟ್ಟುಕೊಂಡು ನೋಡಿ – 'ಗುನ್ನಾಲಾಲ್ ಇವು ಅಸಲಿ ನೋಟುಗಳೇ. ಒಂದು ಕೆಲಸ ಮಾಡೋಣ. ಈ ಬಂಡಲನ್ನು ನಿನ್ನ ರೂಮಿಲ್ಲಿ ಇರಿಸೋಣ. ನಮ್ಮ ಮನೆಗೆ ಹಬ್ಬಕ್ಕೆಂದು ನಿನ್ನೆಯೇ ಅತ್ತೆ ಮಾವ ಬಂದಿದ್ದಾರೆ. ಅದೂ ಅಲ್ಲದೆ ಗಾಟ್ಕೋಪರ್‌ನಲ್ಲಿರುವ ನಮ್ಮ ಮನೆಗೆ ತೆಗೆದುಕೊಂಡು ಹೋಗಲು ಕಷ್ಟವಾಗಬಹುದು. ಒಂದೆರಡು ತಿಂಗಳ ನಂತರ ಏನಾದರೂ ಸಬೂಬು ಹೇಳಿ ಫ್ಯಾಕ್ಟರಿಯ ಕೆಲಸ ಬಿಟ್ಟು ನಮ್ಮ ನಮ್ಮ ಊರುಗಳಿಗೆ ಹೋಗಿಬಿಡೋಣ' ಎಂದು ಆ ಬಂಡಲನ್ನು ಚೀಲವೊಂದರಲ್ಲಿ ತುಂಬಿಕೊಂಡು ಟ್ಯಾಕ್ಸಿಯಲ್ಲಿ ಇಟ್ಟುಕೊಂಡು ಗುನ್ನಾಲಾಲನ ರೂಮಿಗೆ ಬಂದಿದ್ದರು. ಇಬ್ಬರೂ ಕೂತು ನೋಟಿನ ಕಟ್ಟುಗಳನ್ನು ಎಣಿಸಿದ್ದರು. ಸಾವಿರ ರೂಪಾಯಿ ಮುಖಬೆಲೆಯ ನೂರು ಕಟ್ಟುಗಳಿದ್ದವು. ಒಂದು ಕೋಟಿ ರೂಪಾಯಿ! ಒಂದು ಕಟ್ಟನ್ನು ಮಾತ್ರ ತೆಗೆದುಕೊಂಡು ಮಿಕ್ಕಿದ್ದನ್ನೆಲ್ಲ ಚೀಲದಲ್ಲಿ ಕಟ್ಟಿ ಅಡುಗೆ ಕೋಣೆಯ ಸಜ್ಜಾ ಮೇಲೆ ಬಿಸಾಕಿದ್ದರು. ಒಂದು ಕಟ್ಟಿನಲ್ಲಿ ಇಬ್ಬರೂ ಸಮನಾಗಿ ಹಂಚಿಕೊಂಡಿದ್ದರು.

ಐದು ಗಂಟೆಗೆ ಇಬ್ಬರೂ ಮುಂಬಾದೇವಿಯ ದೇವಸ್ಥಾನಕ್ಕೆ ಹೋಗಿ ದರ್ಶನ ಪಡೆದು ಹುಂಡಿಗೆ ತಲಾ ಐದೈದು ಸಾವಿರ ಹಾಕಿ ಎಲ್ಲವೂ ಸಲೀಸಾಗಿ ನಡೆಸಿಕೊಂಡು ಹೋಗುವಂತೆ ಮುಂಬಾದೇವಿಯಲ್ಲಿ ಭಕ್ತಿಯಿಂದ ಪ್ರಾರ್ಥನೆ ಮಾಡಿಕೊಂಡಿದ್ದರು. ಮುರಳೀಧರ ರಾಠೋಡ ಗುನ್ನಾಲಾಲನಿಗಿಂತಲೂ ಹದಿನೈದು ವರ್ಷ ದೊಡ್ಡವನಾಗಿದ್ದು ಬಹಳ ವರ್ಷಗಳಿಂದಲೂ ಮಫತ್ಲಾಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಎಂಡಿ ಮತ್ತು ಡೈರೆಕ್ಟರುಗಳಿಗೆಲ್ಲ ನಂಬಿಕಸ್ಥ ಕೆಲಸಗಾರನಾಗಿದ್ದ. ಹಾಗಾಗಿಯೇ ಅವನಿಗೆ ಪರ್ಚೇಸ್ ಸೆಕ್ಷನ್ನಿನ ಮ್ಯಾನೇಜರ್ ಹುದ್ದೆ ಲಭ್ಯವಾಗಿತ್ತು. ಸಂಬಳ ಅಲ್ಲದೆಯೇ ಸಣ್ಣಪುಟ್ಟ ವ್ಯವಹಾರಗಳಲ್ಲಿ ಒಂದಿಷ್ಟು **extra** ಸಂಪಾದನೆಯನ್ನೂ ಮಾಡಿಕೊಳ್ಳುತ್ತಿದ್ದ. ಮದುವೆಯಾಗಿ ಎರಡು ಮಕ್ಕಳೂ ಇದ್ದವು. ಮಗ ಗಾಟ್ಕೋಪರ್‌ನ ಮಹಾನಗರಪಾಲಿಕೆಯ ಸ್ಕೂಲಿನಲ್ಲಿ ಆರನೆಯ ತರಗತಿಯಲ್ಲಿ ಓದುತ್ತಿದ್ದ. ಅವನಿಗೆ ಕುಡಿತದ ಚಟವಿತ್ತಲ್ಲದೆ ನಾನ್ ವೆಜ್ ಊಟ ತುಂಬಾ ಇಷ್ಟಪಡುತ್ತಿದ್ದ. ಮುಂಬಾದೇವಿಯ ದರ್ಶನ ಪಡೆದ ನಂತರ ಮುರಳೀಧರ ರಾಠೋಡ್ ಈ ಖುಷಿಯ ಸಂದರ್ಭದಲ್ಲಿ ಪಾರ್ಟಿ ಮಾಡೋಣವೆಂದ. ಗುನ್ನಾಲಾಲನಿಗೆ ಕುಡಿತದ ಅಭ್ಯಾಸವಿರಲಿಲ್ಲ. ಅಪರೂಪಕ್ಕೆ ಬಿಯರ್ ಮಾತ್ರ ಕುಡಿಯುತ್ತಿದ್ದ. ಆದರೆ ದಿನಕ್ಕೆ ಐದಾರು ಸಿಗರೇಟುಗಳನ್ನು ಸೇದುತ್ತಿದ್ದ. ಕೆಲಸದ ವೇಳೆಯಲ್ಲಿ ಮಾತ್ರ ಅವನು ಸಿಗರೇಟು ಸೇದುತ್ತಿರಲಿಲ್ಲ. ಪಾರ್ಟಿ ಮಾಡೋಣವೆಂದ ರಾಠೋಡನ ಮಾತಿಗೆ ಗುನ್ನಾಲಾಲನು ಸಮ್ಮತಿಸಿದ.

ಮಾತುಂಗ ಮಾರುಕಟ್ಟೆಯ ಹಿಂಭಾಗದಲ್ಲಿದ್ದ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಇಬ್ಬರೂ ನುಗ್ಗಿದ್ದರು. ರಾಠೋಡ್ ಅರ್ಧ ಬಾಟಲಿ ವಿಸ್ಕಿ ಹೇಳಿದ. ಗುನ್ನಾಲಾಲ ಒಂದು ಬಾಟಲ್ ಬಿಯರ್ ಕುಡಿದ. ರಾಠೋಡ್ ಚಿಕನ್, ಫಿಶ್ ತಿಂದರೆ ಗುನ್ನಾಲಾಲ್ ಈರುಳ್ಳಿ ಪಕೋಡ ತಿಂದಿದ್ದ. ಅಷ್ಟಕ್ಕೇ ಗುನ್ನಾಲಾಲನಿಗೆ ತಲೆ ತಿರುಗುತ್ತಿರುವಂತೆ ಅನ್ನಿಸುತ್ತಿತ್ತು. ಗುನ್ನಾಲಾಲ್ ತಾನೇ ಬಿಲ್ಲು ಕೊಟ್ಟಿದ್ದ. ಬಾರ್‌ನಿಂದ ಹೊರಬಂದಾಗ ರಾತ್ರಿ ಎಂಟು ಗಂಟೆಯಾಗಿತ್ತು. ಗುನ್ನಾಲಾಲ್ ರಾಠೋಡನನ್ನು ಮಾತುಂಗದ ಮೈನ್ ರೋಡಿನ ಬಸ್‌ಸ್ಟಾಪ್‌ನಲ್ಲಿ ಗಾಟ್ಕೋಪರ್ ಬಸ್ ಹತ್ತಿಸಿದ್ದ. ತೂಗಾಡಿಕೊಂಡೇ ಬಸ್ ಹತ್ತಿದ್ದ ರಾಠೋಡ್. ರೂಮಿಗೆ ಬಂದ ಗುನ್ನಾಲಾಲನಿಗೆ ಹಾಸಿಗೆಯ ಮೇಲೆ ಉರುಳಿದ್ದಷ್ಟೇ ನೆನಪು. ಎಚ್ಚರವಾದಾಗ ಮಾರನೆಯ ದಿನ ಬೆಳಿಗ್ಗೆ ಎಂಟು ಗಂಟೆಯಾಗಿತ್ತು. ಹೊಸ ಬಟ್ಟೆ ಕೊಂಡು ಸಂಭ್ರಮದಿಂದ ಹಬ್ಬ ಮಾಡಿದ್ದ. ಪೂರ್ವ ಮಾತುಂಗದ ಗಣಪತಿ ದೇವಸ್ಥಾನಕ್ಕೆ ಭೇಟಿ ನೀಡಿ ಅರ್ಚನೆ ಮಾಡಿಸಿ ಬಂದು ಆರ್ಯ ಭವನ ಹೋಟೆಲಿನಲ್ಲಿ ಹಬ್ಬದ ಊಟ ಮಾಡಿ ನೆಮ್ಮದಿಯಾಗಿ ಮಲಗಿದ. ಮಾರನೆಯ ದಿನ ಕೆಲಸಕ್ಕೆ ಹೋದಾಗ ಆಘಾತಕಾರಿ ಸುದ್ದಿ ಕಾದಿತ್ತು. ಗೌರಿ ಹಬ್ಬದ ದಿನ ರಾತ್ರಿ ಮುರಳೀಧರ ರಾಠೋಡನು ಕುಡಿದು ಬಸ್ಸಿನ ಫುಟ್‌ಬೋರ್ಡ್ ಮೇಲಿಂದ ರಸ್ತೆಗೆ ಬಿದ್ದು ಹಿಂದಿನಿಂದ ಬಂದ ಇನ್ನೊಂದು ಬಸ್ಸಿನ ಅಡಿಗೆ ಬಿದ್ದು ಸತ್ತು ಹೋಗಿದ್ದ. ಗಣೇಶ ಚತುರ್ಥಿಯ ದಿನವೇ ಹೆಣವನ್ನು ಊರಿಗೆ ಕೊಂಡೊಯ್ದಿದ್ದರು. ವಿಷಯ ತಿಳಿದು ಅದ್ಯಾಕೋ ಗುನ್ನಾಲಾಲನಿಗೆ ವಿಚಿತ್ರವಾದ ಖುಷಿಯಾಗಿತ್ತು. ರಾಠೋಡ್ ಆಕ್ಸಿಡೆಂಟ್‌ನಲ್ಲಿ ಸತ್ತ ದಿನ ಪೂರ್ತಿ ಅವನ ಜೊತೆಯಲ್ಲಿ ತಾನು ಇದ್ದದ್ದು ಯಾರಿಗೂ ತಿಳಿದಿರಲಿಲ್ಲ. ದುರಾಸೆ, ವಂಚನೆ, ಸ್ವಾರ್ಥದ ರಾಸಾಯನಿಕಗಳು ಅವನ ಮನದಲ್ಲಿ ನದಿಯಂತೆ ಹರಿದಿದ್ದವು.

ಕನಿಷ್ಠ ರಾಠೋಡನ ಕುಟುಂಬದವರನ್ನು ಮಾತನಾಡಿಸಿಕೊಂಡು ಬರಲೂ ಅವನ ಕಠಿಣ ಮನಸ್ಸು ಒಪ್ಪಿರಲಿಲ್ಲ. ಹಿಂದಿನ ಘಟನೆಗಳ ನೆನಪಿನಿಂದ ಮಫತ್ಲಾಲ್ ಗುನ್ನಾಲಾಲ್ ಬೆವೆತುಹೋಗಿದ್ದ. ಕ್ಷಣ ತಾನು ಡಾಕ್ಟರ್ ಮನೋರಂಜನಿಯವರನ್ನು ಭೇಟಿ ಮಾಡಲೇಬಾರದಾಗಿತ್ತು ಅನ್ನಿಸಿತು. ಮಾರನೆಯ ಬೆಳಿಗ್ಗೆ ತಿಂಡಿ ತಿಂದು ಗುನ್ನಾಲಾಲ್ ಹೊರಗಡೆ ಸ್ವಲ್ಪ ಕೆಲಸವಿದೆಯೆಂದು ಹೇಳಿ ಟ್ಯಾಕ್ಸಿಯನ್ನು ಹತ್ತಿ ಡ್ರೈವರ್‌ಗೆ 'ಧಾರಾವಿ ಜೋಪಡಿ ಪಟ್ಟಿ' ಎಂದಿದ್ದ. ಮುಂಬಯಿಯ ಟ್ಯಾಕ್ಸಿ ಡ್ರೈವರ್‌ಗಳಿಗೆ ಸ್ಲಂ ಎಂದರೆ ಥಟ್ಟನೆ ಅರಿವಾಗುವುದಿಲ್ಲ. ಜೋಪಡಿ ಪಟ್ಟಿ ಎಂದರೇನೇ ಅವರಿಗೆ ಧಾರಾವಿ ಸ್ಲಂ ಎಂದು ತಕ್ಷಣ ತಲೆಗೆ ಹೋಗುವುದು. ಧಾರಾವಿಯಿಂದ ಮುಂಬಯಿಯ ಇತರೆ ಎಲ್ಲಾ ಪ್ರದೇಶಗಳಿಗೂ ರಸ್ತೆ ಮತ್ತು ರೈಲು ಮಾರ್ಗಗಳು ನರಗಳು ಮಾನವನ ಶರೀರದ ಎಲ್ಲಾ ಭಾಗಗಳಿಗೂ ಹರಡಿಕೊಂಡಂತೆ ಹರಡಿಕೊಂಡಿವೆ. ಧಾರಾವಿಗೆ ಇಂಥ ಕನೆಕ್ಟಿವಿಟಿ ಇರುವುದರಿಂದಲೇ ಧಾರಾವಿಯಲ್ಲಿ ವಾಸಿಸುವ ಜನ ಮುಂಬಯಿಯ ಎಲ್ಲಾ ಭಾಗಗಳಿಗೂ ಕೆಲಸಕ್ಕೆಂದು ಹೋಗಿ ಮತ್ತೆ ಧಾರಾವಿಯಲ್ಲಿ ಬಂದು ಬೀಳುತ್ತಾರೆ. ಮುಂಬಯಿಯ ಜೋಪಡಿ ಪಟ್ಟಿಗಳ ಜನರು ಇಲ್ಲದಿದ್ದರೆ ಮುಂಬಯಿ ಕೈ ಕಾಲು ಮುರಿದ ಹೆಳವನಂತೆ ಆಗಿಬಿಡುತ್ತದೆ. ಈ ವಿಷಯ ಗುನ್ನಾಲಾಲನಿಗೆ ಚೆನ್ನಾಗಿ ಗೊತ್ತಿದೆ. ಗುನ್ನಾಲಾಲ್ ಮೈನ್ ರೋಡಿನಲ್ಲಿ ಇಳಿದು ಜೋಪಡಿ ಪಟ್ಟಿ ಪ್ರವೇಶಿಸಿ ತಾನು ಹಿಂದೆ ವಾಸಿಸುತ್ತಿದ್ದ ಜಾಗದ ಕಡೆ ನಡೆದ. ಧಾರಾವಿ ತಾನು ಅಲ್ಲಿಂದ ಬಿಟ್ಟು ಬಂದ ಐವತ್ತು ವರ್ಷಗಳಲ್ಲಿ